# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ ಕೆಂಪೇಗೌಡನಗರ ಉಪವಿಭಾಗ,

## ಬೃ.ಬೆಂ.ಮ.ಪಾಲಿಕೆ ಹೆಚ್. ಸಿದ್ದಯ್ಯ ರಸ್ತೆ, ಬೆಂಗಳೂರು

ಸಂಖ್ಯೆ:ಸ.ಇಂ/ವಾ–118/ಹೊ–171/ವಾರ್ಡ್‌ಸಭೆ/2022–23 ದಿನಾಂಕ: 15/10/22

## ವಾರ್ಡ್ –118ರ ವಾರ್ಡ್ ಸಭೆಯ ನಡವಳಿ

ದಿನಾಂಕ:15–10–2022 ರಂದು ಕೆಂಪೇಗೌಡನಗರ ಉಪವಿಭಾಗ ವಾರ್ಡ್–118 ಹೊಸ ಸಂಖ್ಯೆ: 171 ರ ವಾರ್ಡ್ ಕಛೇರಿಯಲ್ಲಿ ಶ್ರೀ.ಬೀಮಶಂಕರ್, ಕಂದಾಯ ಅಧಿಕಾರಿ ಚಿಕ್ಕಪೇಟೆ ವಾರ್ಡ್–118 ಹೊಸ ಸಂಖ್ಯೆ:171 ರ ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭಾ ನಡವಳಿಗಳು.

ಹಾಜರಿದವರು:–

| ಕ್ರ ಸಂ. | ಹೆಸರು | ಹುದ್ದೆ | ಮೊಬೈಲ್ ಸಂಖ್ಯೆ |
|---|---|---|---|
| 1 | ಶ್ರೀ.ಬೀಮಶಂಕರ್ | ನೋಡಲ್ ಅಧಿಕಾರಿಗಳು | 9480683063 |
| 2 | ಶ್ರೀ.ಕೆ.ಎಸ್.ವಿಜಯ್‌ಕುಮಾರ್ | ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು ವಾರ್ಡ್ ಸಂಖ್ಯೆ:118 | 9480688118 |
| 3 | ಶ್ರೀ.ಆರ್.ವೀರಯ್ಯ | ಕಿರಿಯ ಆರೋಗ್ಯ ಪರಿವೀಕ್ಷಕರು | 9844859560 |
| 4 | ಶ್ರೀ. ಸರ್ದಾರ್ | ಜೆ.ಇ/ಎಸ್–2/ಡಬ್ಲೂ–2 ಬೆಸ್ಕಾಂ | 9449866105 |
| 5 | ಶ್ರೀಮತಿ. ರೇವತಿ | Development Assistant | – |
| 6 | ಶ್ರೀ. ಪಿ. ಗಿರೀಶ್ ಪುಟ್ಟಪ್ಪ | ಸಿ.ಕೆ.ಸಿ. ಗಾರ್ಡನ್ ಸ್ಥಳೀಯರು | – |

ಮಾನ್ಯ ಅಧ್ಯಕ್ಷರು, ಮೇಲ್ಕಂಡ ಎಲ್ಲರನ್ನು ಸ್ವಾಗತದೊಂದಿಗೆ ಪರಸ್ಪರ ಪರಿಚಯ ಮಾಡಿಕೊಳ್ಳಲು ತಿಳಿಸುತ್ತಾ ಸಭೆಯನ್ನು ಪ್ರಾರಂಭಿಸಲಾಯಿತು.

**ಚರ್ಚಿಸಲಾದ ವಿಷಯಗಳು:–**

ದಿನಾಂಕ: 15–10–2022ರ ಸಭೆಯಲ್ಲಿ ರಾಮಣ್ಣ ಗಾರ್ಡನ್‌ನ ಖಾಲಿ ಜಾಗದಲ್ಲಿ ಕಸವನ್ನು ತೆರವುಗೊಳಿಸುವಂತೆ ಸೂಚಿಸಿದ್ದು. ಸದರಿ ಕಸವನ್ನು ತೆರವುಗೊಳಿಸಲಾಗಿರುತ್ತದೆ ಎಂದು ಕಿರಿಯ ಆರೋಗ್ಯ ಪರಿವೀಕ್ಷಕರವರು ತಿಳಿಸಿರುತ್ತಾರೆ.

ಸ್ಲಂ ಮಹಿಳಾ ಸಂಘಟನೆಯ ರವರು ಮಾತನಾಡಿ, ವಿನೋಭನಗರ Slumನ ರಸ್ತೆಯಲ್ಲಿ ಶೌಚಾಲಯಗಳಲ್ಲಿ ಸ್ವಚ್ಛತೆ ಹಾಗೂ ನೀರಿನ ತೊಂದರೆ ಇರುತ್ತದೆ ಹಾಗೂ ವಿನೋಭನಗರ Slumನ ಮನೆಗಳಿಗೆ ಒಳಚರಂಡಿ ವ್ಯವಸ್ಥೆ ಇರುವುದಿಲ್ಲವೆಂದು ಸಭೆಯಲ್ಲಿ ತಿಳಿಸಿರುತ್ತಾರೆ. ಗುರಪ್ಪ ಗಾರ್ಡನ್‌ನಲ್ಲಿ ಸರಿಯಾದ ಶೌಚಾಲಯಗಳ ವ್ಯವಸ್ಥೆ ಇರುವುದಿಲ್ಲ ಹಾಗೂ ಎರಡು ಶೌಚಾಲಯಗಳಿದ್ದು ಅದಕ್ಕೆ ಬೀಗ ಹಾಕಿರುತ್ತಾರೆ.

ವಿನೋಭನಗರದಲ್ಲಿ ಹೊಸದಾಗಿ ಶೌಚಾಲಯಗಳನ್ನು ನಿರ್ಮಿಸಿಕೊಂಡು ಕೋರಿದ್ದು, ವಿನೋಭನಗರ ಅಂಗನವಾಡಿ ಕೇಂದ್ರದ ಪಕ್ಕದಲ್ಲಿ ಕಸ ಹಾಕಿದ್ದು, ಅದನ್ನು ತೆರವುಗೊಳಿಸುವಂತೆ ಹಾಗೂ ವಿನೋಭನಗರದಲ್ಲಿ ಕಟ್ಟಡ ಪಕ್ಕದಲ್ಲಿಯೇ ವಿದ್ಯುತ್ ಕಂಬಗಳಿದ್ದು, ಇದರಿಂದಾಗಿ ವಿದ್ಯುತ್ ಅವಘಡನೆಯಾಗಿವ ಸಂಭವಿರುತ್ತದೆ. ಅದ್ದರಿಂದ ವಿದ್ಯುತ್ ಕಂಬಗಳನ್ನು ಸ್ಥಳಾಂತರಿಸಬೇಕೆಂದು ಸಭೆಯಲ್ಲಿ ಕೋರಿದರು.

ಸ್ಥಳೀಯರು ಮತನಾಡಿ ಸಿ.ಕೆ.ಸಿ. ಗಾರ್ಡನ್ 2ನೇ ಅಡ್ಡರಸ್ತೆಯಲ್ಲಿ ಕೆಲವರು ರಾತ್ರಿ ವೇಳೆಯಲ್ಲಿ ರಸ್ತೆಯಲ್ಲಿ ಕುಡಿಯುತ್ತಿರುತ್ತಾರೆ. ಕುಡಿದು ರಸ್ತೆಯಲ್ಲಿ ಓಡಾಡಿವವರಿಗೆ ತೊಂದರೆ ಉಂಟಾಗುತ್ತದೆ. ರಾತ್ರಿ ವೇಳೆಯಲ್ಲಿ ಪೊಲೀಸ್ ಸಿಬ್ಬಂಧಿಯಲ್ಲಿ ನಿಯೋಜಿಸಕೊಡಬೇಕೆಂದು ಸಭೆಯಲ್ಲಿ ಕೋರಿದರು. ಸಿ.ಕೆ.ಸಿ. ಗಾರ್ಡನ್ 2ನೇ ಅಡ್ಡರಸ್ತೆಯಲ್ಲಿ ಶ್ರೀ.ಪ್ರವೀಣ್ ಎಂಬುವವರ ಅಂಗಡಿಯ ಮುಂದೆ ವಾರದಲ್ಲಿ ಎರಡು ಬಾರಿ ಟಂಟ್‌ಗಳನ್ನು ಅಳವಡಿಸುತ್ತಿರುತ್ತಾರೆ. ಇದರಿಂದಾ ಸಾರ್ವಜನಿಕರಿಗೆ ಓಡಾಡಲು ತೊಂದರೆ ಉಂಟಾಗುತ್ತಿದೆ. ಹಾಗೂ ಸಿ.ಕೆ.ಸಿ. ಗಾರ್ಡನ್ 2ನೇ ಅಡ್ಡರಸ್ತೆಯಲ್ಲಿ ಕಸ ಹೆಚ್ಚಾಗಿ ಇರುವುದರಿಂದ ಇದನ್ನು ತೆರವುಗೊಳಿಸುವಂತೆ ಸಭೆಯಲ್ಲಿ ತಿಳಿಸಿದರು.

ಅಂತಿಮವಾಗಿ ಅಧ್ಯಕ್ಷರು ಮಾತನಾಡಿ ಸಾರ್ವಜನಿಕರ ದೂರುಗಳನ್ನು ಕೂಡಲೇ ಸ್ಪಂದಿಸಬೇಕೆಂದು ತಿಳಿಸಿರುತ್ತಾರೆ ಹಾಗೂ ಮುಂದಿನ ಸಭೆಗೆ ಕಡ್ಡಾಯವಾಗಿ ಎಲ್ಲಾ ಅಧಿಕಾರಿಗಳಿಗೆ ವಾರ್ಡ್ ಸಮಿತಿ ಸಭೆಗೆ ಸಮಯಕ್ಕೆ ಸರಿಯಾಗಿ ಹಾಜರಾಗುವಂತೆ ಸೂಚಿಸಿ, ತಪ್ಪಿದಲ್ಲಿ ಹಾಜರಾಗದ ಅಧಿಕಾರಿಗಳಿಗೆ ನೋಟೀಸ್ ಜಾರಿ ಮಾಡಲು ತಿಳಿಸಿರುತ್ತಾರೆ.ಹಾಜರಿದ್ದ ಅಧಿಕಾರಿಗಳಿಗೆ ಸಮನ್ವಯ ಸಾಧಿಸಿಕೊಂಡು ಸಕಾಲದಲ್ಲಿ ಸಾರ್ವಜನಿಕರ ಕುಂದುಕೊರತೆಗಳಿಗೆ ಸ್ಪಂದಿಸಿ ಪರಿಹರಿಸಲು ಸಹಕಾರ ನೀಡುವಂತೆ ಕೋರುತ್ತಾ, ಸಭೆಗೆ ಹಾಜರಿದ್ದ ಎಲ್ಲಾರಿಗೂ ವಂದನೆಗಳನ್ನು ಅರ್ಪಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿಗಳು ಹಾಗೂ
ಸಹಾಯಕ ಅಭಿಯಂತರರು
ವಾರ್ಡ್ –171 ಸುಧಾಮನಗರ

15/10/22
ನೋಡಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ: 171